# ನೂತನ ಟ್ರ್ಯಾಕ್‌ನಲ್ಲಿ ಹುಲಿಮರಿ



ವಿನೋದ್ ಪ್ರಭಾಕರ್ ಅಭಿನಯದ 'ಮರಿ ಟೈಗರ್' ಸಿನಿಮಾ ತೆರೆ ಕಾಣುವ ಹಂತದಲ್ಲಿದೆ. ಪಿ.ಎನ್. ಸತ್ಯ ನಿರ್ದೇಶನದ ಈ ಸಿನಿಮಾ ವಿನೋದ್ ಅವರ ವರ್ಚಸ್ಸನ್ನು ಹೆಚ್ಚಿಸಲಿದೆ ಎನ್ನುವುದು ಚಿತ್ರ ತಂಡದ ನಿರೀಕ್ಷೆ.

'ಮರಿ ಟೈಗರ್' ತೆರೆ ಕಾಣುವ ಮುನ್ನವೇ ವಿನೋದ್ ನಟನೆಯ ಹೊಸ ಚಿತ್ರ 'ಕ್ರ್ಯಾಕ್' ಕಳೆದ ವಾರ ಮುಹೂರ್ತ ನಡೆಸಿದೆ. 'ಇವನೇ ಸಪರೇಟ್ ಟ್ರ್ಯಾಕ್' ಎನ್ನುವುದು ಶೀರ್ಷಿಕೆಯ ಅಡಿಟಿಪ್ಪಣಿ. ರಾಮ್‌ನಾರಾಯಣ್ ನಿರ್ದೇಶನದ ಈ ಸಿನಿಮಾ ಎಂದಿನಂತೆ ಮರಿಹುಲಿಯ ಇಮೇಜ್‌ಗೆ ತಕ್ಕಂತೆ ಇರಲಿದೆಯಂತೆ. ವಿನೋದ್‌ಗೆ ಜೋಡಿಯಾಗಿ 'ಆರ್‌ಎಕ್ಸ್ ಸೂರಿ' ಚಿತ್ರದ ಖ್ಯಾತಿಯ ಆಕಾಂಕ್ಷಾ ನಟಿಸುತ್ತಿದ್ದಾರೆ.

ವಿನೋದ್ ಹಾಗೂ ರಾಮ್‌ನಾರಾಯಣ್ ಈ ಮೊದಲು 'ಟೈಸನ್' ಚಿತ್ರದಲ್ಲಿ ಒಟ್ಟಿಗೆ ಕೆಲಸ ಮಾಡಿದ್ದರು. ಆ ಸಿನಿಮಾ ಐವತ್ತು ದಿನಗಳ ಪ್ರದರ್ಶನ ಕಂಡಿತ್ತು. ಈ ಹಿನ್ನೆಲೆಯಲ್ಲಿ 'ಕ್ರ್ಯಾಕ್' ಚಿತ್ರ ಕೂಡ ಗೆಲ್ಲಲಿದೆ ಎನ್ನುವುದು ಚಿತ್ರತಂಡದ ಲೆಕ್ಕಾಚಾರ.

ರಾಮ್‌ನಾರಾಯಣ್ ತಮ್ಮ ಹೊಸ ಚಿತ್ರಕ್ಕೆ ಪೊಲೀಸ್ ಕಥೆಯನ್ನು ಆಯ್ದುಕೊಂಡಿದ್ದಾರೆ. ಕಥೆಯ ಗುಟ್ಟು ಬಿಟ್ಟುಕೊಡದ ಅವರು, ಮನರಂಜನೆಯ ಎಲ್ಲ ಆಯಾಮಗಳನ್ನೂ ತಮ್ಮ ಸಿನಿಮಾ ಒಳಗೊಂಡಿರಲಿದೆ ಎಂದರು. ಬೆಂಗಳೂರು, ಚಿಕ್ಕಮಗಳೂರು ಹಾಗೂ ಚೆನ್ನೈಗಳಲ್ಲಿ 'ಕ್ರ್ಯಾಕ್'ನ ಚಿತ್ರೀಕರಣ ನಡೆಯಲಿದೆ. ಶಮಿತಾ ಮಲ್ನಾಡ್ ಹಾಗೂ ಚಿನ್ನ ಈ ಚಿತ್ರಕ್ಕೆ ಸಂಗೀತ ಸಂಯೋಜಿಸುತ್ತಿದ್ದಾರೆ. ಜೆ. ಗಣೇಶ್ ಅವರ ಛಾಯಾಗ್ರಹಣ ಚಿತ್ರಕ್ಕಿದೆ.

# ಯುವಕರ ಜೊತೆಗೆ 'ಜವ'ರಾಯ!

'ಯುವ'ಶಕ್ತಿಯ ಜೊತೆಗೆ 'ಜವ'! ಹೀಗೆಂದು ಬಣ್ಣಿಸಿದ್ದು ನಟ ಸಾಯಿಕುಮಾರ್. ಚೊಚ್ಚಲ ನಿರ್ದೇಶನದ ಪುಲಕದಲ್ಲಿರುವ ಅಭಯಚಂದ್ರರ 'ಜವ' ಚಿತ್ರದ ಪ್ರಮುಖ ಪಾತ್ರವೊಂದರಲ್ಲಿ ಸಾಯಿಕುಮಾರ್ ನಟಿಸುತ್ತಿದ್ದಾರೆ. ಕನಸು ಕಂಗಳ ಯುವಕರೊಂದಿಗೆ ಕೆಲಸ ಮಾಡುತ್ತಿರುವ ಪುಲಕ ಅವರದು.

ಚಿತ್ರಕಥೆ ಹೇಳುವ ಸಂದರ್ಭದಲ್ಲಿನ ಅಭಯಚಂದ್ರರ ಆತ್ಮವಿಶ್ವಾಸವನ್ನು ಸಾಯಿಕುಮಾರ್ ನೆನಪಿಸಿಕೊಂಡರು. ಅಭಯ್ ಅವರಿಗೆ ತನ್ನ ನೆಚ್ಚಿನ ನಟನೊಂದಿಗೆ ಚೊಚ್ಚಲ ನಿರ್ದೇಶನದ ಸಿನಿಮಾದಲ್ಲೇ ಕೆಲಸ ಮಾಡುತ್ತಿರುವ ಖುಷಿ.



ನಿಗೂಢ ಕಥಾನಕಗಳ ಸಿನಿಮಾಗಳು ಜನ ಮೆಚ್ಚುಗೆ ಪಡೆಯುತ್ತಿರುವ ಸಂದರ್ಭದಲ್ಲಿ, ಅದೇ ಹಳಿಯಲ್ಲಿ ಸಾಗಲು ಉದ್ದೇಶಿಸಿರುವ ಅಭಯ್, 'ಜವ' ಚಿತ್ರದಲ್ಲಿ ಕೌತುಕಗಳ ಸರಮಾಲೆಯನ್ನೇ ಹೆಣೆದಿದ್ದಾರಂತೆ. ಚಿತ್ರದ ಶೀರ್ಷಿಕೆಯಲ್ಲೇ ಸಾವಿನ ಸಂಕೇತವಿರುವುದು ಕಥೆಯ ಸುಳಿವನ್ನು ನೀಡುವಂತಿದೆ. ಈ ಸಸ್ಪೆನ್ಸ್–ಥ್ರಿಲ್ಲರ್ ಕಥೆ ರೂಪಿಸಲು ಅವರು ಒಂದೂವರೆ ವರ್ಷ ಸಮಯ ತೆಗೆದುಕೊಂಡಿದ್ದಾರಂತೆ. ಕಥೆಯೇ ಚಿತ್ರದ ನಾಯಕ ಎನ್ನುವ ಅರ್ಥದಲ್ಲಿ – 'ನನ್ನ ಚಿತ್ರದಲ್ಲಿ ನಾಯಕ ಅಥವಾ ನಾಯಕಿ ಎಂದು ಸ್ಪಷ್ಟವಾಗಿ ಯಾವ ಪಾತ್ರವೂ ಇರುವುದಿಲ್ಲ. ಇದು ಜನರನ್ನು ತಲುಪುವ ಸಿನಿಮಾ' ಎನ್ನುತ್ತಾರೆ.

ಅಭಯ್‌ರ ಸಹೋದರ ವಿನಯ್ ಈ ಚಿತ್ರಕ್ಕೆ ಸಂಗೀತ ಸಂಯೋಜಿಸುತ್ತಿದ್ದಾರೆ. ಛಾಯಾಗ್ರಹಣ ನಂದಕುಮಾರ್ ಅವರದು. ನಾಗಿಣಿಭರಣ, ಭವಾನಿ ಪ್ರಕಾಶ್, ಅಕ್ಷತಾ, ಕುಶಾಲ್ ತಾರಾಗಣದಲ್ಲಿರುವ ಪ್ರಮುಖರು.